# ಶ್ರೀಮಾತೆ ಶಾರದಾದೇವಿ

# ದುಷ್ಟಶಿಕ್ಷಕಿ - ಶಿಷ್ಟರಕ್ಷಕಿ

❑ ಸ್ವಾಮಿ ಪುರುಷೋತ್ತಮಾನಂದ

**ಶ್ರೀಮಾತೆ ಶಾರದಾದೇವಿಯವರ ವ್ಯಕ್ತಿವೈಶಿಷ್ಟ್ಯವನ್ನು ಬಹಳ ಬೋಧಪ್ರದವಾಗಿ ನಿರೂಪಿಸಿರುವ ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿಯವರು ರಾಮಕೃಷ್ಣ ಮಿಷನ್ನಿನ ಬೆಳಗಾಂ ಶಾಖೆಯ ಮುಖ್ಯಸ್ಥರಾಗಿರುವರು. ಪೂಜ್ಯರು ದಿವ್ಯತ್ರಯರ ಜೀವನ ಸಂದೇಶಗಳನ್ನು ಬಿತ್ತರಿಸುವ ಹಲವಾರು ಕೃತಿಗಳನ್ನು ಕನ್ನಡದಲ್ಲಿ ರಚಿಸಿರುವರು.**

ಶ್ರೀಮಾತೆ ಶಾರದಾದೇವಿಯವರು ಕಾಮಾರಪುಕುರದ ಪತಿಗೃಹದಲ್ಲಿ ವಾಸವಾಗಿದ್ದ ಸಂದರ್ಭವದು. ಶ್ರೀರಾಮಕೃಷ್ಣರ ನಿರ್ಯಾಣಾನಂತರದ ಆ ದಿನಗಳಲ್ಲಿ ಅವರು ಹಲವು ಬಗೆಯ ಕಷ್ಟಗಳಿಗೆ ಒಳಗಾಗಬೇಕಾದ ಪರಿಸ್ಥಿತಿಯೊದಗಿತ್ತು. ಕಡು ಬಡತನ, ಬಂಧುಪರಿವಾರದ ಅಸಡ್ಡೆ, ಧೂರ್ತತನ, ಅದರಿಂದಾಗಿ ಮನೆಯಲ್ಲಿ ಏಕಾಂಗಿತನ, ಹಳ್ಳಿಗರ ಒರಟುತನ—ಹೀಗೆ ಅನೇಕ ಪ್ರತಿಕೂಲಗಳು. ಈ ನಡುವೆ, ಒಮ್ಮೆ ಮತಿವಿಕಲ್ಪ ಹೊಂದಿದ ವ್ಯಕ್ತಿಯೊಬ್ಬನ ದೆಸೆಯಿಂದ ಅವರೊಂದು ದೊಡ್ಡ ಸಂಕಷ್ಟಕ್ಕೀಡಾಗಬೇಕಾಯಿತು. ಅದೊಂದು ಭೀಷಣ ಪ್ರಸಂಗ.

ಶ್ರೀರಾಮಕೃಷ್ಣರು ಮಹಾಸಮಾಧಿ ಹೊಂದಿದ ಬಳಿಕ ಅವರ ತ್ಯಾಗೀಶಿಷ್ಯರೆಲ್ಲರೂ ಬಾರಾನಗರ್ ಎಂಬಲ್ಲಿ ಮಠ ಮಾಡಿಕೊಂಡು ಆಧ್ಯಾತ್ಮಿಕ ಸಾಧನೆಯಲ್ಲಿ ಮಗ್ನರಾಗಿದ್ದರು. ಅವರೆಲ್ಲರ ಸತ್ಸಂಗವನ್ನು ಬಯಸಿ ಬರುತ್ತಿದ್ದ ಭಕ್ತರಲ್ಲಿ ಹರೀಶ ಎಂಬ ತರುಣನೂ ಒಬ್ಬ. ಆದರೆ ಅವನು ಸಂನ್ಯಾಸಿಗಳೊಂದಿಗೆ ಬೆರೆಯುವುದು ಅವನ ಹೆಂಡತಿಗೆ ಸಹ್ಯವಾಗದ ಸಂಗತಿ. ಅವನ ಈ ಪ್ರವೃತ್ತಿಯನ್ನು ಹೋಗಲಾಡಿಸಲು ಅವಳು ಮಾಟ-ಮಂತ್ರ ಮಾಡಿಸಿದಳು. ಆದರೆ ದುರದೃಷ್ಟವಶಾತ್, ಅದರ ಪರಿಣಾಮವಾಗಿ ಅವನು ಹೆಂಡತಿಯ ಮಾತು ಕೇಳಿಕೊಂಡಿರುವುದರ ಬದಲು ಅವನ ಬುದ್ಧಿಯೇ ಕೆಟ್ಟುಹೋಯಿತು. ಹೀಗೆ ಬುದ್ಧಿ ಸ್ತಿಮಿತ ತಪ್ಪಿದ ಸ್ಥಿತಿಯಲ್ಲೇ ಅವನೊಮ್ಮೆ ಕಾಮಾರಪುಕುರಕ್ಕೂ ಬಂದ. ಅವನನ್ನು ನೋಡಿದೊಡನೆಯೇ ಅವನು ಸಹಜ ಸ್ಥಿತಿಯಲ್ಲಿಲ್ಲ ಎಂಬುದು ಶಾರದಾದೇವಿಯವರಿಗೆ ತಿಳಿಯಿತು. ಕೂಡಲೆ ಬಂದು ಅವನನ್ನು ಕರೆದೊಯ್ಯುವಂತೆ ಬಾರಾನಗರ್ ಮಠಕ್ಕೆ ಪತ್ರ ಬರೆಸಿದರು. ಸುದ್ದಿ ತಿಳಿದದ್ದೇ ತಡ ಸ್ವಾಮಿ ಶಾರದಾನಂದರೂ ಸ್ವಾಮಿ ನಿರಂಜನಾನಂದರೂ ಕಾಮಾರಪುಕುರದೆಡೆಗೆ ಹೊರಟರು. ನಿರಂಜನಾನಂದರು ಕಟ್ಟುಮಸ್ತಾದ ದೃಢಕಾಯರು; ಆ ಹುಚ್ಚನನ್ನು ಹತ್ತಿಕ್ಕಲು ತಕ್ಕ ವ್ಯಕ್ತಿ. ಆದರೆ ಆ ಸ್ವಾಮಿಗಳಿಬ್ಬರು ಬಂದು ಸೇರುವುದರೊಳಗೆ ಹರೀಶನ ಹುಚ್ಚು ಉಲ್ಬಣಿಸಿ ಹತೋಟಿ ತಪ್ಪಿಬಿಟ್ಟಿತ್ತು. ಒಮ್ಮೆಯಂತೂ ಅವನನ್ನು ನಿಗ್ರಹಿಸಿ, ಅವನಿಂದಾಗಬಹುದಾದ ಅನಾಹುತವನ್ನು ತಪ್ಪಿಸಲು ಶಾರದಾದೇವಿಯವರು ತಮ್ಮ ಸುಪ್ತ ಅಂತಶ್ಶಕ್ತಿಯನ್ನು ಮೆರೆಸಬೇಕಾದ ಪರಿಸ್ಥಿತಿ ಒದಗಿತು. ಆ ರೋಮಾಂಚಕಾರೀ ಘಟನೆಯನ್ನು ಮುಂದೊಮ್ಮೆ ಅವರೆ ಭಕ್ತರೆದುರು ಬಣ್ಣಿಸುತ್ತಾರೆ:



*ಬೇಲೂರು ಮಠದಲ್ಲಿ ಪೂಜಿಸಲ್ಪಡುವ ಶ್ರೀಮಾತೆಯವರ ಭಾವಚಿತ್ರ*

"ಒಂದು ದಿನ ನಾನು ಪಕ್ಕದ ಮನೆಗೆ ಹೋಗಿದ್ದವಳು ಹಿಂದಿರುಗಿ ಬರುತ್ತಿದ್ದೆ. ಬಂದು ಇನ್ನೇನು ಅಂಗಳದಲ್ಲಿ ಕಾಲಿಟ್ಟಿದ್ದೆ, ಆಗಲೇ ಹರೀಶ ನನ್ನ ಬೆನ್ನಟ್ಟಿ ಬಂದ. ನಮ್ಮ ಮನೆಯಲ್ಲೋ ಬೇರೆ ಯಾರೂ ಇದ್ದಿರಲಿಲ್ಲ. ಅವನು ಹೀಗೆ ಅಟ್ಟಿಸಿಕೊಂಡು ಬಂದಾಗ ನಾನು ಎಲ್ಲಿಗೆ ಹೋಗಬೇಕು? ಹೇಗೆ ತಪ್ಪಿಸಿಕೊಳ್ಳಬೇಕು? ನನಗೆ ದಿಗಿಲಾಯಿತು. ಗಾಬರಿಯಿಂದ ಓಡಿ ಅಲ್ಲೇ ಇದ್ದ ಬತ್ತದ ಬಣವೆಯ ಹಿಂದೆ ಅವಿತಿಟ್ಟುಕೊಳ್ಳಲು ನೋಡಿದೆ. ಆದರೆ ಅವನು ಅಟ್ಟಿಸಿಕೊಂಡು ಬರುವುದನ್ನು ಬಿಡಲಿಲ್ಲ. ಆ ಹುಲ್ಲಿನ ರಾಶಿಗೆ ಏಳು ಸಲ ಸುತ್ತು ಬಂದದ್ದಾಯಿತು. ಇನ್ನು ನನ್ನಿಂದ ಓಡುವುದಕ್ಕೆ ಸಾಧ್ಯವಾಗಲಿಲ್ಲ. ಆಗ ನಾನು ನನ್ನ ನಿಜರೂಪ ತಾಳಿ ಸ್ಥಿರವಾಗಿ ನಿಂತುಬಿಟ್ಟೆ. ಅವನನ್ನು ಹಿಡಿದು

ಬೀಳಿಸಿ ಅವನ ಎದೆಯ ಮೇಲೆ ಮಂಡಿಯೂರಿ, ಅವನ ನಾಲಿಗೆಯನ್ನು ಎಳೆದು ಹಿಡಿದುಕೊಂಡು ಕಪಾಳಕ್ಕೆ ಚೆನ್ನಾಗಿ ಬಾರಿಸಿದೆ. ಎಷ್ಟು ಜೋರಾಗಿ ಬಾರಿಸಿದೆ ಎಂದರೆ, ಅವನ ಉಸಿರು ಕಟ್ಟಿ ಹೋಯಿತು, ಏದುಸಿರು ಬಿಡಲಾರಂಭಿಸಿದ. ನನ್ನ ಕೈಬೆರಳುಗಳೆಲ್ಲ ಕೆಂಪಗಾಗಿಬಿಟ್ಟಿದ್ದುವು."

ನಿಜಕ್ಕೂ ಇದೊಂದು ಮೈನವಿರೇಳಿಸುವಂತಹ ಬೀಭತ್ಸ ಘಟನೆ. ಶಾರದಾದೇವಿಯವರೆನ್ನುತ್ತಾರೆ, "... ಆಗ ನಾನು ನನ್ನ ನಿಜರೂಪ ತಾಳಿ ಸ್ಥಿರವಾಗಿ ನಿಂತುಬಿಟ್ಟೆ" ಎಂದು. 'ನಿಜ ರೂಪ' ಎಂದರೆ ಯಾವುದು? ಇಲ್ಲಿ ನಾವು ಶಾರದಾದೇವಿಯವರ ಅಂತಸ್ಸತ್ವವನ್ನು ಗುರುತಿಸುವ ಸಂದರ್ಭ ಬರುತ್ತದೆ. ಅವರು ಮಾನವರೂಪಧಾರಿಣಿಯಾದ ಜಗನ್ಮಾತೆಯೇ. ಇದನ್ನು ಅವರ ಜೀವನ ಕಥೆಯಲ್ಲೇ ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗಿ ನೋಡಬಹುದು. ಆದ್ದರಿಂದ ಅವರು ಸಮಯ ಬಂದಾಗ ಯಾವ ಭಾವ ತಾಳುವುದಕ್ಕೂ ಸಮರ್ಥರು; ಯಾವ ರೂಪ ತಾಳುವುದಕ್ಕೂ ಸಮರ್ಥರು. ಜಗನ್ಮಾತೆ ವಿವಿಧ ಕಾರ್ಯೋದ್ದೇಶಗಳಿಗಾಗಿ ವಿವಿಧ ರೂಪಗಳನ್ನು ತಳೆಯುತ್ತಾಳೆ ಎಂದು ಶಾಸ್ತ್ರಗಳು ತಿಳಿಸಿಕೊಡುತ್ತವೆ. ಆ ವಿವಿಧ ರೂಪಗಳಿಗೆ ವಿವಿಧ ಹೆಸರುಗಳಿವೆ—ಕಾಳೀ, ತಾರಾ, ಷೋಡಶೀ, ಭುವನೇಶ್ವರೀ, ಬಗಲಾ ಇತ್ಯಾದಿ. ಇವುಗಳ ಪೈಕಿ ಭಯಂಕರ ಸ್ವರೂಪಿಣಿಯಾದ ಬಗಲಾ ದೇವಿ, ಒಬ್ಬ ದೈತ್ಯನ ಎದೆಯ ಮೇಲೆ ಮಂಡಿಯೂರಿ ನಾಲಗೆ ಎಳೆದು ಸಂಹರಿಸಿದ ಕತೆ ಬರುತ್ತದೆ. ಇಲ್ಲಾದರೋ ಶಾರದಾ ದೇವಿಯವರು ಆ ಹರೀಶನ ಎದೆಯ ಮೇಲೆ ಮಂಡಿಯೂರಿ ನಾಲಗೆಯನ್ನು ಎಳೆದು ಹಿಡಿದುಕೊಂಡು ಕೆನ್ನೆಗೆ ಬಾರಿಸಿದ್ದನ್ನು ಕಂಡರೆ ಅವರು ಆಗ ಬಗಲಾದೇವಿಯ ಆವೇಶ ತಾಳಿದ್ದರು ಎಂದು ಮನಸ್ಸಿಗೆ ಸ್ಫುರಿಸುವುದಿಲ್ಲವೆ? ಆದ್ದರಿಂದ ಅವರು "ನಾನು ನನ್ನ ನಿಜರೂಪ ತಾಳಿ ನಿಂತುಬಿಟ್ಟೆ" ಎಂದರೆ ಈ ಬಗಲಾದೇವಿಯ ರೂಪದಿಂದ ನಿಂತುಬಿಟ್ಟರು ಎಂದೇ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಈ ಮಾತು ಭಕ್ತರಾದವರಿಗೇನೋ ಒಪ್ಪಿಗೆಯಾದೀತು. ಆದರೆ ಕೆಲವರು ವಿಚಾರವಾದಿಗಳಿಗೆ ಇದನ್ನು ಒಪ್ಪಲು ಕಷ್ಟವಾಗಬಹುದು. ಅಂಥವರು ಹೀಗೆ ವಿಚಾರ ಮಾಡಿ ನೋಡಲಿ: ಎಲ್ಲರಿಗೂ ತಿಳಿದಿರುವಂತೆ ಸ್ತ್ರೀಶರೀರಕ್ಕಿಂತ ಪುರುಷಶರೀರ ಬಲವಾದದ್ದು; ಅಲ್ಲದೆ ಆ ಹರೀಶನೋ ಯುವಕ. ಅದರಲ್ಲೂ ಅವನಿಗೆ ಹುಚ್ಚು ! ಹುಚ್ಚು ಕೆರಳಿದವರಿಗೆ ಬಲ ಹೆಚ್ಚು ಎಂಬುದು ಸತ್ಯ. ಈಗ, ಎಂತಹ ಬಲಿಷ್ಠ ಸ್ತ್ರೀಯೇ ಆದರೂ, ಹೆಚ್ಚೆಂದರೆ, ಅಂತಹ ಒಬ್ಬ ಪುರುಷನನ್ನು ಬೀಳಿಸಬಹುದೇನೋ, ಆದರೆ ಅವನ ನಾಲಗೆಯನ್ನು ಹಿಡಿದು ಎಳೆಯಲು ಸಾಧ್ಯವೇ! ಮೊದಲನೆಯದಾಗಿ ಬಲವಾದ ಹಲ್ಲುಗಳ ಒಳಗೆ ಸೇರಿರುವ ಮತ್ತು ಬೆರಳಿನ ಹಿಡಿತಕ್ಕೆ ಸಿಗದಿರುವ ನಾಲಗೆಯನ್ನು ಬಾಯಿತೆರೆಯಿಸಿ ಹೊರಗೆ ಎಳೆಯುವುದಕ್ಕೆ ಹೇಗೆ ಸಾಧ್ಯ? ಅದಕ್ಕಿಂತ ಹೆಚ್ಚಾಗಿ, ಆತನ ನಾಲಗೆಯನ್ನು ಹಿಡಿದೆಳೆಯಬೇಕು ಎಂಬ ಪ್ರಚೋದನೆಯಾದರೂ ಶಾರದಾದೇವಿಯವರಲ್ಲಿ ಹೇಗೆ ಉಂಟಾಗಿರಬಹುದು! ಒಬ್ಬ ಸಾಧಾರಣ ಹೆಂಗಸಿನಲ್ಲಿ ಅಂತಹ ಪ್ರಚೋದನೆಯಾಗಲು ಎಲ್ಲಾದರೂ ಸಾಧ್ಯವೇ? ಆದ್ದರಿಂದ ಶಾರದಾದೇವಿಯವರು ಆತನ ನಾಲಗೆಯನ್ನು ಎಳೆದು ಹಿಡಿದುಕೊಂಡದ್ದಲ್ಲದೆ ರಪರಪನೆ ಕೆನ್ನೆಗೆ ಬಾರಿಸಬೇಕಾದರೆ ಅವರಲ್ಲಿ ಯಾವುದೋ ಅಲೌಕಿಕ ಶಕ್ತಿಯ ಆವಿರ್ಭಾವವಾಗಿರಲೇಬೇಕು. ಸ್ವಭಾವತಃ ಅತ್ಯಂತ ಕರುಣಾಮಯಿಯಾದ ಅವರಲ್ಲಿ ಈ ಬಗೆಯ ಕಾಠಿಣ್ಯವನ್ನು ಕಂಡಾಗ, ಪರಸ್ಪರ ವಿರುದ್ಧವಾದ ಈ ಎರಡೂ ಗುಣಗಳಿಂದ ಕೂಡಿದ ದೇವಿಯ ಗುಣಗಾನ ಮಾಡಿರುವ ದೇವೀ ಮಾಹಾತ್ಮ್ಯದ ಒಂದು ಶ್ಲೋಕ ನಮ್ಮ ನೆನಪಿಗೆ ಬರುತ್ತದೆ:

ಚಿತ್ತೇ ಕೃಪಾ ಸಮರನಿಷ್ಠುರತಾ ಚ ದೃಷ್ಟಾ ।
ತ್ವಯ್ಯೇವ ದೇವಿ ವರದೇ ಭುವನತ್ರಯೇಽಪಿ ॥

—'ಹೇ ದೇವಿ, ಚಿತ್ತದಲ್ಲಿ ಕೃಪೆ ಮತ್ತು ಸಮರದಲ್ಲಿ ನಿಷ್ಠುರತೆ ಇವೆರಡೂ ಇರುವವರು ಮೂರು ಲೋಕಗಳಲ್ಲಿಯೂ ನಿನ್ನನ್ನು ಬಿಟ್ಟರೆ ಬೇರಾರೂ ಇಲ್ಲ."

ಮಹಾತ್ಮರ ಮನಸ್ಸಿನ ಲಕ್ಷಣವೇ ಇದು—ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ. ಜಗನ್ಮಾತೆ ಕೃಪಾಮಯಿಯಾಗಿ ಶಿಷ್ಟರನ್ನು ರಕ್ಷಿಸುತ್ತಾಳೆ. ಹಾಗೆಯೇ ನಿಷ್ಠುರಳಾಗಿ ದುಷ್ಟರನ್ನು ಶಿಕ್ಷಿಸುತ್ತಾಳೆ. ಆದರೆ ಇಲ್ಲಿ ಶಾರದಾದೇವಿಯವರು ದಂಡಿಸಿ ಮರ್ದನ ಮಾಡಿದುದು ಹರೀಶನನ್ನಲ್ಲ, ಅವನೊಳಗೆ ವ್ಯಕ್ತನಾದ ಅಸುರನನ್ನು, ಪಾಶವೀಶಕ್ತಿಯನ್ನು. ಮತ್ತು ಅವರು ಆ ಘಳಿಗೆಯಲ್ಲಿ ಆತ್ಮರಕ್ಷಣೆಗಾಗಿ ರೌದ್ರಾವತಾರ ತಾಳಿದರೇ ಹೊರತು ಇನ್ನಾವ ಸಂದರ್ಭದಲ್ಲೂ ಅವರು ತಮ್ಮ ಆ ಸ್ವರೂಪವನ್ನು ಮೆರೆಸುವ ಸಾಧ್ಯತೆಯೇ ಇರಲಿಲ್ಲ ಎನ್ನುವುದು ಖಂಡಿತ. ಶಾರದಾ ದೇವಿಯವರ ದುಷ್ಟಶಿಕ್ಷಣ ಕಾರ್ಯವೆಂದರೆ ಸಂಹಾರ ಮಾಡುವುದಲ್ಲ, ಪರಿವರ್ತನಗೊಳಿಸುವುದು. ಆ ಶಿಕ್ಷೆ ಎನ್ನುವುದೂ ಕೂಡ ಅವರ ಕರುಣೆಯಿಂದಲೆ ಪ್ರೇರಿತವಾದದ್ದು.

ನಿಜಕ್ಕೂ, ಅವರ ಅಮೃತಹಸ್ತದಿಂದ ಏಟು ತಿಂದ ಹರೀಶನ ಮನಸ್ಸು ಬಹಳಷ್ಟು ಹತೋಟಿಗೆ ಬಂದಿತು. ಇದಾದ ಒಂದೆರಡು ದಿನಗಳಲ್ಲೇ ಅಲ್ಲಿಗೆ ಶಾರದಾನಂದರೂ ನಿರಂಜನಾನಂದರೂ ಬಂದರು. ಶಾರದಾದೇವಿಯವರ ಕೈಯಿಂದ ಏಟು ತಿಂದು ಮೊದಲೇ ಮೆತ್ತಗಾಗಿದ್ದ ಹರೀಶ ಈಗ ಇವರಿಬ್ಬರು ಸ್ವಾಮಿಗಳನ್ನು ಕಂಡು ಕಾಲಿಗೆ ಬುದ್ಧಿ ಹೇಳಿದ. ಅವನು ಅಲ್ಲಿಂದ ಬೃಂದಾವನಕ್ಕೆ ಹೋಗಿ ನೆಲೆನಿಂತ. ಅಲ್ಲಿ ಕೆಲಕಾಲದ ಬಳಿಕ ಆತ ಮೊದಲಿನಂತಾದ; ಪೂರ್ತಿ ಸಹಜ ಸ್ಥಿತಿಗೆ ಬಂದ.

ಇತ್ತ ಕಾಮಾರಪುಕುರಕ್ಕೆ ಬಂದಿದ್ದ ಶಾರದಾನಂದರೂ ನಿರಂಜನಾನಂದರೂ ಶಾರದಾದೇವಿಯವರ ದರ್ಶನ ಮಾಡಿಕೊಂಡು ಕಲ್ಕತ್ತಕ್ಕೆ ಹಿಂದಿರುಗಿದರು. ಶಾರದಾದೇವಿಯವರು ನಡೆಸುತ್ತಿದ್ದ ಕಾರ್ಪಣ್ಯದ ಬಾಳ್ವೆಯನ್ನು ಕಂಡು ಅವರಿಬ್ಬರೂ ಆಶ್ಚರ್ಯಾಘಾತಗೊಂಡಿದ್ದರು. ಶಾರದಾದೇವಿಯವರು ಇಂತಹ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ್ದಾರೆ ಎಂಬುದನ್ನು ಯಾರೂ ಕನಸಿನಲ್ಲೂ ಕಂಡಿರಲಿಲ್ಲ ಎಂದು ಶಾರದಾನಂದರೇ ಮುಂದೊಮ್ಮೆ

ಹೇಳುತ್ತಾರೆ. ನಿಜ, ಶಾರದಾದೇವಿಯವರಿಗೆ ಅನೇಕ ಅನುಕೂಲಸ್ಥ ಭಕ್ತರು-ವಿಶ್ವಾಸಿಗಳು ಇದ್ದುದರಿಂದ ಅವರು ದುರ್ಭರ ಬಾಳ್ವೆ ನಡೆಸುವಂತಾಗಿರಬಹುದೆಂದು ಯಾರೂ ಊಹಿಸಲೂ ಸಾಧ್ಯವಿರಲಿಲ್ಲ. ಆದರೆ ಆ ಭಕ್ತಮಹಾಶಯರೆಲ್ಲ ಇದ್ದುದು ಕಲ್ಕತ್ತ ಮಹಾನಗರದಲ್ಲಿ. ಹಾಗಾದರೆ ಶಾರದಾ ದೇವಿಯವರು ಹಳ್ಳಿಯನ್ನು ತೊರೆದು ಕಲ್ಕತ್ತಕ್ಕೇ ಹೋಗಿ ಇರಬಹುದಾಗಿತ್ತಲ್ಲ ಎಂದರೆ, ಇಲ್ಲ; ಅದೊಂದು ಅಧ್ಯಯನಯೋಗ್ಯವಾದ ಪ್ರತ್ಯೇಕ ಅಧ್ಯಾಯ. ಅದನ್ನು ಸಂಕ್ಷೇಪವಾಗಿ ಹೇಳುವುದಾದರೆ, ಶ್ರೀರಾಮಕೃಷ್ಣರ ಆದೇಶಾನುಸಾರವೇ ಅವರು ಕಾಮಾರಪುಕುರದಲ್ಲಿ ನೆಲೆನಿಂತದ್ದು. ಪತಿದೇವನ ಪವಿತ್ರ ಅನುಜ್ಞೆಗೆ ಅನುವರ್ತಿಯಾಗಿರುವುದೇ ಅವರ ಪರಮ ಧ್ಯೇಯ; ಅದರಲ್ಲೇ ಅವರಿಗೆ ಪರಮಾನಂದ. ಆದ್ದರಿಂದ ಅವರು ತಾವು ಅತೀವ ಸಂಕಷ್ಟದಲ್ಲಿ ಸಿಲುಕಿರುವುದಾಗಿ ಇತರರಿಗೆ ತಿಳಿಸುವ ಗೊಡವೆಗೇ ಹೋಗಲಿಲ್ಲ. ಆದರೆ ಅವರು ಅಷ್ಟೆಲ್ಲ ಒತ್ತಡಗಳ ನಡುವೆ ಜೀವಿಸಿದ್ದರೂ, ಅವರಲ್ಲಿ ದಯಾಪರತೆ, ಪರೋಪಕಾರ ಬುದ್ಧಿ ಹಾಗೂ ಗುರುಸ್ಥಾನದಿಂದ ತಿಳಿವಳಿಕೆ ನೀಡಬಲ್ಲ ಸಾಮರ್ಥ್ಯಗಳು ಸಂಪೂರ್ಣ ಜಾಗೃತವಾಗಿದ್ದುವು. ಇದಕ್ಕೆ ಉದಾಹರಣೆಯಾದ ಒಂದು ಪ್ರಸಂಗವನ್ನು ಇಲ್ಲಿ ನೋಡಬಹುದು.

ಶಾರದಾದೇವಿಯವರು ಕಾಮಾರಪುಕುರದಲ್ಲಿದ್ದ ಆ ದಿನಗಳಲ್ಲೇ ಒಮ್ಮೆ ಅಲ್ಲಿಗೆ ಒರಿಸ್ಸಾ ಕಡೆಯ ಒಬ್ಬರು ಸಾಧುಗಳು ಬಂದಿದ್ದರು. ಅವರು ಇಲ್ಲಿ ಲಾಹಾ ಮನೆತನಕ್ಕೆ ಸೇರಿದ ಒಂದು ಕುಟೀರದಲ್ಲಿ ವಾಸವಾಗಿದ್ದರು. ಅವರಿಗೆ ಬೇಕಾದ ಎಲ್ಲ ಅನುಕೂಲತೆಗಳನ್ನು ಮನೆಯ ಹಿರಿಯಳಾದ ಪ್ರಸನ್ನಮಯಿ ನೋಡಿಕೊಳ್ಳುತ್ತಿದ್ದಳು. ಅವರೊಬ್ಬ ಬಹಳ ಒಳ್ಳೆಯ ಸಾಧು. ಆದ್ದರಿಂದ ಆ ಹಳ್ಳಿಯ ಜನರ ಗೌರವಾದರಕ್ಕೆ ಪಾತ್ರರಾಗಿದ್ದರು. ಆದರೆ ಏಕೋ ಏನೋ, ಆ ಹಳ್ಳಿಯ ಕೆಲವು ಪುಂಡ ಯುವಕರು ಅವರ ಮೇಲೆ ಸಿಟ್ಟಿಗೆದ್ದಿದ್ದರು. ಆ ಯುವಕರಿಗೆ ಎಲ್ಲ ಬಿಟ್ಟು ಈ ಸಾಧುವಿನ ಮೇಲೆ ಏಕೆ ಕಣ್ಣು ಬಿದ್ದಿತೋ ತಿಳಿಯದು. ಬಹುಶಃ ಅವರು ಶ್ರೀಮಂತರ ಆಶ್ರಯದಲ್ಲಿ ಸುಖವಾಗಿದ್ದಾರಲ್ಲ ಎಂಬ ಕಣ್ಣುರಿಯೋ ಏನೋ. ಅಂತೂ ಈ ಪುಂಡರ ದೆಸೆಯಿಂದಾಗಿ ಆ ಮುದಿ ಸಂನ್ಯಾಸಿಗಳು ಲಾಹಾರ ಮನೆಯನ್ನು ಮಾತ್ರವಲ್ಲ, ಆ ಹಳ್ಳಿಯನ್ನೇ ಬಿಟ್ಟುಹೋಗಬೇಕಾದ ಪರಿಸ್ಥಿತಿ ಒದಗಿತು.

ಇದನ್ನು ತಿಳಿದ ಶಾರದಾದೇವಿಯವರು ಕೂಡಲೇ ಅವರ ನೆರವಿಗೆ ಬಂದರು. ಆ ಸಾಧುಗಳ ಬಗ್ಗೆ ಗೌರವದಿಂದಿದ್ದ ಗ್ರಾಮಸ್ಥರನ್ನು ಒಗ್ಗೂಡಿಸಿ, ಅವರಿಗಾಗಿ ಹಾಲ್ದಾರಪುಕುರ ಕೆರೆಯ ಹತ್ತಿರ ಒಂದು ಸಣ್ಣ ಕುಟೀರ ಕಟ್ಟಿಕೊಡುವಂತೆ ಪ್ರೇರೇಪಿಸಿದರು. ಆಗ ಮಳೆಗಾಲ; ಆಗಸದಲ್ಲಿ ಕಪ್ಪು ಮೋಡಗಳು ಹೆಪ್ಪುಗಟ್ಟಿ ಯಾವ ಕ್ಷಣದಲ್ಲಾದರೂ ಮಳೆ ಸುರಿಸಲು ಸನ್ನದ್ಧವಾಗಿದ್ದುವು. ಹೀಗಿರುವಾಗ ಕುಟೀರದ ಮಣ್ಣುಗೋಡೆ ಏರಿಸುವುದು ಹೇಗೆ? ಆಗ ಶಾರದಾದೇವಿಯವರು ಕೈಮುಗಿದು, “ಹೇ ಭಗವಂತ, ದಯವಿಟ್ಟು ತಡೆದುಕೋ. ಈ ಕುಟೀರವನ್ನು ಕಟ್ಟಿ ಮುಗಿಸಿದ ಮೇಲೆ ನಿನಗೆ ಇಷ್ಟಬಂದಷ್ಟು ಮಳೆ ಸುರಿಸು” ಎಂದು ಕಳಕಳಿಯಿಂದ ಪ್ರಾರ್ಥಿಸಿಕೊಂಡರು. ಅವರ ಬೇಡಿಕೆಗೆ ಭಗವಂತ ಸಮ್ಮತಿಸಿದ—ಸುಗಮವಾಗಿ ಕುಟೀರ ಕಟ್ಟಿ ಮುಗಿಯಿತು. ಸಾಧುಗಳು ಅದರಲ್ಲಿ ವಾಸಮಾಡಲು ಉದ್ಯುಕ್ತರಾದರು. ಈಗ ಶಾರದಾದೇವಿಯವರು ತಮಗೇ ಸಾಕಷ್ಟು ಇಲ್ಲದಿದ್ದರೂ ಆ ಸಾಧುಗಳ ಊಟೋಪಚಾರದ ಹೊಣೆಯನ್ನು ಹೊತ್ತರು. ಪ್ರತಿದಿನ ಬೆಳಗ್ಗೆ-ಸಾಯಂಕಾಲ ಹೋಗಿ ಅವರನ್ನು ಪ್ರೀತಿಯಿಂದ ವಿಚಾರಿಸಿಕೊಂಡು ಬರುತ್ತಿದ್ದರು. ಆದರೆ ಆ ಸಾಧುಗಳು ಬಹಳ ದಿನ ಬದುಕಲಿಲ್ಲ. ಕೆಲವೇ ತಿಂಗಳಲ್ಲಿ ಆ ಕುಟೀರದಲ್ಲೇ ದೇಹತ್ಯಾಗ ಮಾಡಿದರು.

ಈ ಸಂದರ್ಭದಲ್ಲಿ ನಮಗೆ ಶಾರದಾದೇವಿಯವರ ವ್ಯಕ್ತಿತ್ವದ ಇನ್ನೊಂದು ಬಹುಮುಖ್ಯ ಅಂಶ ಗೊತ್ತಾಗುತ್ತದೆ. ಅದೇ ವೈರಾಗ್ಯಪ್ರೇಮ; ವಿರಾಗಿಗಳನ್ನು ಕುರಿತಾದ ಆದರ. ಯಾರು ಸ್ವಯಂ ವಿಲಾಸಿಯೋ ಅವನು ಇನ್ನೊಬ್ಬ ವಿಲಾಸಿಯನ್ನೇ ಹುಡುಕಿಕೊಂಡು ಹೋಗುತ್ತಾನೆ. ಯಾರು ಸ್ವಯಂ ವಿರಾಗಿಯೋ ಅವನು ಇನ್ನೊಬ್ಬ ವಿರಾಗಿಯನ್ನೇ ಹುಡುಕಿಕೊಂಡು ಹೋಗುತ್ತಾನೆ. ಇಲ್ಲಿ ಶಾರದಾದೇವಿಯವರು, ಅಸಹಾಯಕರಾದ ಒಬ್ಬ ಸಾಧುವಿಗೆ ಸೇವೆಸಲ್ಲಿಸಿದ ರೀತಿ ತುಂಬ ಮನಮುಟ್ಟುವಂತಿದೆ. ಆ ಸಾಧುಗಳೇನಾದರೂ ಇವರ ಬಳಿಗೆ ಬಂದು ಇವರ ನೆರವನ್ನು ಕೇಳಿದರೇನು? ಇಲ್ಲ. ಅವರು ತಮ್ಮ ಪಾಡಿಗೆ ಹೊರಟುಹೋಗುವುದರಲ್ಲಿದ್ದರು. ಅಲ್ಲದೆ, ಅವರು ಶ್ರೀರಾಮಕೃಷ್ಣರ ಭಕ್ತರೇನು? ಅದೂ ಅಲ್ಲ. ಅವರೊಬ್ಬ ಸರ್ವಸಂಗ ಪರಿತ್ಯಾಗಿಗಳು ಅಷ್ಟೆ. ಅಂಥ ಅವರ ಬಳಿಗೆ ತಾವಾಗಿಯೇ ಧಾವಿಸಿಹೋಗಿ ಕರೆತಂದು ಅವರಿಗೊಂದು ಕುಟೀರ ಕಟ್ಟಿಸಿಕೊಡಬೇಕಾದರೆ, ಇಲ್ಲಿ ಶಾರದಾದೇವಿಯವರ ವೈರಾಗ್ಯಪ್ರೀತಿಯನ್ನು ಗಮನಿಸಬೇಕು ನಾವು. ಇದಲ್ಲದೆ, ಆ ಸಾಧುವಿಗೆ ನೆರವಾಗುವುದರಿಂದ ಅವರು ಊರ ಪುಂಡರ ಅಸಮಾಧಾನಕ್ಕೆ ಗುರಿಯಾಗುವ ಭಯವಿತ್ತು. ಅವರೋ ಒಬ್ಬ ಬಡ ಹೆಂಗಸು; ಅದೂ ತೀವ್ರ ಸಾಮಾಜಿಕ ಕಟ್ಟಳೆಗಳಿಗೆ ಒಳಪಟ್ಟ ಬ್ರಾಹ್ಮಣ ವಿಧವೆ. ಆ ಸಾಧುವಿಗೆ ನೆರವಾಗಬೇಕೆಂಬ ಕಾತರತೆಯಲ್ಲಿ ಅವರು ಈ ಎಲ್ಲ ಪ್ರತಿಕೂಲ ಅಂಶಗಳನ್ನೂ ಎದುರಿಸಿ ನಿಂತದ್ದನ್ನು ಗಮನಿಸಿದಾಗ ನಮಗಾಗುವ ಆಶ್ಚರ್ಯ ಅಷ್ಟಿಷ್ಟಲ್ಲ. ಇದೆಲ್ಲದರೊಂದಿಗೆ ಆ ಮಳೆಯ ಅವಾಂತರ ಬೇರೆ! ತಮ್ಮ ಶ್ರದ್ಧಾಪೂರ್ವಕ ಪ್ರಾರ್ಥನೆಯಿಂದ ಆ ಮಳೆಯನ್ನು ನಿಲ್ಲಿಸಿ ಕುಟೀರ ಕಟ್ಟಿಸಿಕೊಡಬೇಕಾದರೆ, ಅವರ ವೈರಾಗ್ಯಪ್ರೀತಿ ಎಷ್ಟಿದ್ದಿರಬೇಕು! ಅಲ್ಲದೆ, ಶಿಷ್ಟತನ, ಸಾಧುತ್ವ ಇವು ಯಾರಲ್ಲೇ ಇದ್ದರೂ, ಹೇಗೇ ವ್ಯಕ್ತಗೊಂಡಿದ್ದರೂ ಅವರಿಗೆ ಶಿಷ್ಟರಕ್ಷಕಿಯಾದ ಜಗನ್ಮಾತೆಯ ಸಿರಿರಕ್ಷೆ ಕಟ್ಟಿಟ್ಟದ್ದು ಎಂಬುದನ್ನು ಮನದಟ್ಟುಪಡಿಸುವಲ್ಲಿ ಈ ಘಟನೆಯೊಂದು ಸಮರ್ಪಕ ನಿದರ್ಶನವಾಗಬಲ್ಲದು.

ಶ್ರೀಮಾತೆ ಶಾರದಾದೇವಿಯವರು ಅಂದು ಆ ಹುಚ್ಚ ಹರೀಶನ ದುಷ್ಟತನವನ್ನು ಶಿಕ್ಷಿಸುವಲ್ಲಿ ತಮ್ಮ ನಿಜ ಸಾಮರ್ಥ್ಯವನ್ನು ತೋರಿಸಿದರೆ, ಇಂದು ಈ ಸಾಧುಗಳನ್ನು ಪುಂಡು ಯುವಕರ ಕೈಯಿಂದ ರಕ್ಷಿಸುವ ಸಾಮರ್ಥ್ಯವನ್ನು ತೋರುತ್ತಿದ್ದಾರೆ. ಹೀಗೆ ಅವರಲ್ಲಿ, ಶಿಕ್ಷಿಸುವ ಹಾಗೂ ರಕ್ಷಿಸುವ ಎರಡೂ ಸಾಮರ್ಥ್ಯಗಳು ಪ್ರಕಾಶಮಾನವಾಗಿ ಪ್ರಕಟಗೊಂಡಿರುವುದನ್ನು ಕಾಣಬಹುದು.